## ಶ್ರೀಶಂಕರಾಚಾರ್ಯ ವಿರಚಿತ 'ಲಕ್ಷ್ಮೀನೃಸಿಂಹ ಸ್ತೋತ್ರ' ದಿಂದ

**ಸಂಸಾರಕೂಪಮತಿಘೋರಮಗಾಧಮೂಲಂ, ಸಂಪ್ರಾಪ್ಯ ದುಃಖಶತಸರ್ಪಸಮಾಕುಲಸ್ಯ ।**
**ದೀನಸ್ಯ ದೇವ ಕೃಪಯಾ ಪದಮಾಗತಸ್ಯ, ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥**



ಅತಿ ಘೋರವೂ ಅತ್ಯಂತ ಅಗಾಧವೂ ಆದ ಸಂಸಾರವೆಂಬ ಬಾವಿಯಲ್ಲಿ ಬಿದ್ದು ನೂರಾರು ದುಃಖಗಳೆಂಬ ಸರ್ಪಗಳಿಂದ ಕಚ್ಚಿಸಿಕೊಂಡು, ದೀನನಾಗಿ ನಿನ್ನಡಿಗೆ ಬಂದಿರುವೆ; ನನ್ನ ಮೇಲೆ ಕೃಪೆಯಿಟ್ಟು, ಹೇ ದೇವ, ಲಕ್ಷ್ಮೀನೃಸಿಂಹ, ನನಗೆ ನಿನ್ನ ಕರಗಳ ಆಸರೆಯನ್ನು ನೀಡು.

**ಸಂಸಾರವೃಕ್ಷಮಘಬೀಜಮನಂತಕರ್ಮ ಶಾಖಾಶತಂ ಕರಣಪತ್ರಮನಂಗಪುಷ್ಪಮ್ ।**
**ಆರುಹ್ಯ ದುಃಖಫಲಿತಂ ಪತತೋ ದಯಾಲೋ, ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥**

ಪಾಪಬೀಜದಿಂದ ಜನಿಸಿ, ಎಣೆಯಿಲ್ಲದ ಕರ್ಮಗಳೇ ರೆಂಬೆಗಳಾಗಿ, ಇಂದ್ರಿಯಗಳೇ ಎಲೆಗಳಾಗಿ, ಕಾಮಪ್ರವೃತ್ತಿಯೇ ಹೂವಾಗಿ, ದುಃಖವೇ ಫಲವಾಗಿ ಇರುವ ಈ ಸಂಸಾರವೃಕ್ಷವನ್ನೇರಿ ಕೆಳಗೆ ಬೀಳುತ್ತಿರುವ ನನಗೆ, ದಯಾಳುವಾದ ಹೇ ಲಕ್ಷ್ಮೀನೃಸಿಂಹ, ನಿನ್ನ ಕರಗಳ ಆಸರೆಯನ್ನು ನೀಡು.

**ಸಂಸಾರಘೋರಗಹನೇ ಚರತೋ ಮುರಾರೇ, ಮಾರೋಗ್ರಭೀಕರಮೃಗಪ್ರಚುರಾರ್ದಿತಸ್ಯ ।**
**ಆರ್ತಸ್ಯ ಮತ್ಸರನಿದಾಘಸುದುಃಖಿತಸ್ಯ, ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ॥**

ಸಂಸಾರವೆಂಬ ಘೋರಾರಣ್ಯದಲ್ಲಿ ಸಂಚರಿಸುತ್ತ, ಭಯಂಕರವಾದ ಕಾಮಮೃಗದ ಹಿಂಸೆಯಿಂದ ಕಾಡಲ್ಪಟ್ಟು, ಮತ್ಸರವೆಂಬ ಬಿಸಿಲ ಬೇಗೆಯಲ್ಲಿ ಬೆಂದು ಬಹು ಬಳಲಿರುವ ನನಗೆ, ಹೇ ಮುರಾರಿ, ಲಕ್ಷ್ಮೀನೃಸಿಂಹ, ನಿನ್ನ ಕರಗಳ ಆಸರೆಯನ್ನು ನೀಡು.



## ಕುಟುಂಬ ಪಾಲನೆ

ಸಂಸಾರವೆಂಬುದು ಗಾಳಿಯ ಸೊಡರು. – *ಬಸವಣ್ಣ*

ಸಂಸಾರದಲ್ಲಿ ಪ್ರೇಮ ಮತ್ತು ವಿಶ್ವಾಸಗಳು ಶಾಶ್ವತವಾದುವೇ ಹೊರತು, ಲಕ್ಷ್ಮಿಯಲ್ಲ. – *ತುಲಸೀದಾಸ*

ಸಂಸಾರವೆಂಬುದು ನಾಗರಿಕತೆಯ ಕೇಂದ್ರ – *ವಿಲ್ ಡ್ಯುರಾಂಟ್*

ತಂದೆತಾಯಿಯರ ಮಾತು ಭಗವಂತನ ವಾಣಿ. ಏಕೆಂದರೆ, ಅವರ ಮಕ್ಕಳಿಗೆ ಅವರು ಸ್ವರ್ಗದೂತರು. –*ವಿಲಿಯಮ್ ಶೇಕ್ಸ್‌ಪಿಯರ್*



ಯಾರಾದರೂ ಸರಿಯೇ, ಅವರು ತಮ್ಮ ದೇಶಕ್ಕೆ ಮತ್ತು ಮಾನವಜನಾಂಗಕ್ಕೆ ಮಾಡಬಹುದಾದ ಅತ್ಯಂತ ದೊಡ್ಡ ಸೇವೆಯೆಂದರೆ, ಒಳ್ಳೆಯ ರೀತಿಯಲ್ಲಿ ಕುಟುಂಬವನ್ನು ನಡೆಸುವುದು.
– *ಜಾರ್ಜ್ ಬರ್ನಾರ್ಡ್ ಷಾ*

ಬರೀ ಮಕ್ಕಳನ್ನು ಪಡೆದರೆ, ಪೋಷಕರಾಗಲಾರಿರಿ. ಅದು ಹೇಗೆಂದರೆ, ಬರೀ ಪಿಯಾನೋವನ್ನು ಇಟ್ಟುಕೊಂಡಿದ್ದರೆ, ನೀವು ಪಿಯಾನೋ ವಾದಕರಾಗುವುದಿಲ್ಲವಷ್ಟೇ. –*ಮೈಕೆಲ್ ಲೆವಿನ್*

ಕಷ್ಟದ ಸಮಯದಲ್ಲಿ, ಕುಟುಂಬವೇ ಲೇಸು. –*ಬರ್ಮಾ ಗಾದೆ*

ಕುಟುಂಬವೆಂಬುದು ನಿಸರ್ಗದ ಮಹೋನ್ನತ ರಚನೆಗಳಲ್ಲಿ ಒಂದು. –*ಜಾರ್ಜ್ ಸಂತಾಯನ*

ನೀವು ನಿಮ್ಮ ಕುಟುಂಬವನ್ನೇನೂ ಆಯ್ಕೆ ಮಾಡುವುದಿಲ್ಲ. ಅದು ನಿಮಗೆ ದೇವರು ಕೊಟ್ಟಿರುವ ಕೊಡುಗೆ. ಹಾಗೆಯೇ ನೀವು ಕೂಡ ನಿಮ್ಮ ಕುಟುಂಬಕ್ಕೆ ದೇವರ ಕೊಡುಗೆಯೇ ಆಗಿದ್ದೀರಿ.
–*ಡೆಸ್ಮಂಡ್ ಟುಟು*

# PACKAGE TOURS


**with HOTEL ROOM ACCOMMODATION & SOUTH INDIAN VEG. FOOD**




**South India : 10 Days**
Madurai, Rameswaram, Kanyakumari, Trichy, Srirangam, Navagraha Temples..



**Charodham / Thirtha Yatra : 18/22/26 Days**
Gangotri, Yamunotri, Badri, Kedar, Haridwar, Rishikesh, Kashi, Gaya, Prayag, Agra, Mathura, Jaipur .......



**Shimla Special : 19 Days**
Shimla, Manali, Rohtang Pass (optional) Dalhousie, Vaishnavi Devi ...



**Kailash Yatra & Mukthinath : 16/19 Days**
Mount Kailash, Manasa Sarovara, Kathmandu, Pokhara, Manokamana, Mukthinath ...



**Panchadwarka & Asta Jyothirlinga : 24 Days**
Ahmedabad, Somnath, Dwarka, Nagesham, Udaipur, Mt. Abu, Mathrugaya, Shirdi, Nasik, Shani Singanapur..

## INTERNATIONAL PACKAGES



*Singapore Malaysia Thailand & Srilanka*

*Dubai*



*& many more......*

ಶ್ರೀ ಹನ್ಸಾ ಟ್ರಾವೆಲ್ಸ್

**SHRI HANSAA TRAVELS**


**RECOGNISED BY DEPARTMENT OF TOURISM, GOVT. OF KARNATAKA**

No. 640, 40th Cross (Near Prabha Eye Clinic), 8th Block, Jayanagar, Bangalore - 560 070.
☎ : (080) 26543891 / 26643276 Mobile : (0) 9341415612 / 9341215612
e-mail : hansaatravels@gmail.com web : www.hansaatravels.com

# 'ಪ್ರೀತಿ'ಯೆಂಬ ಮಹಾಮಂತ್ರ

### ಜಗದಾನಂದದಾಯಕ

**ಭಾ**ಗವತದಲ್ಲಿ ಒಂದು ಸ್ವಾರಸ್ಯಕರವಾದ ಪ್ರಸಂಗ ಬರುತ್ತದೆ. ಶ್ರೀಕೃಷ್ಣನು ಗೋಕುಲದಲ್ಲಿ ಅನೇಕ ಲೀಲೆಗಳನ್ನು ಮಾಡುತ್ತಿದ್ದನು. ಬ್ರಹ್ಮದೇವನು ಇದನ್ನೆಲ್ಲ ಗಮನಿಸುತ್ತಿದ್ದನು. ಮುದ್ದುಕೃಷ್ಣನ ಲೀಲೆಗಳನ್ನು ಇನ್ನೂ ನೋಡಬೇಕೆಂದು ಅವನಿಗೆ ಆಸೆಯಾಯಿತು. ಒಂದು ದಿನ ಅವನು ಗೋಕುಲದ ಕರುಗಳನ್ನು ಎಲ್ಲೋ ಬಚ್ಚಿಟ್ಟನು. ಕೃಷ್ಣನು ಕರುಗಳನ್ನು ಹುಡುಕಲು ಹೋದನು. ಆಗ ಗೋಪಬಾಲಕರನ್ನೂ ಬಚ್ಚಿಟ್ಟುಬಿಟ್ಟನು. ಕೃಷ್ಣನು ಕರುಗಳಿಗಾಗಿ ಬಹಳ ಹುಡುಕಾಡಿದನು. ಅವುಗಳನ್ನು ಕಾಣದೆ ನಿರಾಶನಾಗಿ ಹಿಂದಿರುಗಿದನು. ಇತ್ತ ಗೋಪಬಾಲಕರೂ ಕಾಣಲಿಲ್ಲ. ಅವರಿಗಾಗಿಯೂ ಹುಡುಕಿದನು. ಕಡೆಗೆ ಬ್ರಹ್ಮನದೇ ಈ ಕೆಲಸ ಎಂದು ಅವನಿಗೆ ಗೊತ್ತಾಯಿತು.



ಶ್ರೀಕೃಷ್ಣನು ಭಗವಂತನ ಅವತಾರವಲ್ಲವೇ! ಇನ್ನೊಂದು ಚಿಕ್ಕ ಸೃಷ್ಟಿಯನ್ನೇ ಅವನು ಮಾಡಿಬಿಟ್ಟನು. ಕ್ಷಣಮಾತ್ರದಲ್ಲಿ ತಾನೇ ಗೋಪಬಾಲಕರಾಗಿಬಿಟ್ಟನು. ತಾನೇ ಕರುಗಳೂ ಆಗಿಬಿಟ್ಟನು. ಎಲ್ಲವೂ ಹಾಗೆಯೇ ಇತ್ತು. ಶ್ರೀಕೃಷ್ಣನೇ ಎಲ್ಲವೂ ಆಗಿ ವಿಜೃಂಭಿಸಿದನು. ಅಂದು ಸಂಜೆ ಎಂದಿನಂತೆ, ಗೋಪಬಾಲಕರೂ, ಕರುಗಳೂ ತಮ್ಮ ತಮ್ಮ ಮನೆಗಳನ್ನು ಸೇರಿಕೊಂಡರು. ಗೋಪಿಯರು ತಮ್ಮ ಮಕ್ಕಳೆಂದೇ ತಿಳಿದು ಕೃಷ್ಣನನ್ನು ಸ್ವಾಗತಿಸಿ ಲಾಲನೆ ಪಾಲನೆ ಮಾಡಿದರು. ಗೋವುಗಳೂ ತಮ್ಮ ಕರುಗಳೆಂದೇ ತಿಳಿದು ಕೃಷ್ಣನನ್ನೇ ಮುದ್ದುಮಾಡಿದವು. ಹಲವಾರು ದಿನಗಳ ಕಾಲ ಹೀಗೇ ನಡೆಯಿತು. ಆದರೆ ಒಂದೇ ಒಂದು ವ್ಯತ್ಯಾಸ ಮಾತ್ರ ಕಂಡಿತು. ಗೋಪಬಾಲಕರಲ್ಲಿ ಗೋಪಿಗಳಿಗೆ ಇದ್ದ ವಾತ್ಸಲ್ಯವು ಅತಿಶಯವಾಗಿ ವೃದ್ಧಿಹೊಂದಿತ್ತು. ತಮ್ಮ ಕರುಗಳಲ್ಲಿ ಗೋವುಗಳಿಗೆ ಇದ್ದ ಪ್ರೀತಿಯೂ ಅದೆಷ್ಟೋ ಪಟ್ಟು ಜಾಸ್ತಿಯಾಗಿತ್ತು. ದಿನದಿನಕ್ಕೂ ಆಶ್ಚರ್ಯಕರವಾದ ರೀತಿಯಲ್ಲಿ ಈ ಪ್ರೇಮಾದರಭಾವವು ಹೆಚ್ಚುತ್ತಲೇ ಹೋಗುತ್ತಿತ್ತು. ಅದು ಹೆಚ್ಚು ಹೆಚ್ಚು ಆನಂದವನ್ನು ಗೋಪಿಯರಿಗೂ, ಗೋವುಗಳಿಗೂ ನೀಡುತ್ತಿತ್ತು. ಹೀಗೆ ಕೃಷ್ಣನು ಸರ್ವಜೀವಭೂತಗಳಿಗೂ 'ಆನಂದದಾಯಕ'ನಾಗಿದ್ದನು.

### ಕುಟುಂಬದ ಜೀವಾಳ

ಭಗವಂತನು ಪ್ರೇಮಸ್ವರೂಪ. ನಾವೆಲ್ಲರೂ ಭಗವತ್‌ಸ್ವರೂಪರು. ನಮ್ಮ ಅಂತರಂಗದಲ್ಲಿಯೂ ಅಗಣಿತ ಪ್ರೇಮನಿಧಿಯು ಅಡಗಿದೆ; ಅನಂತವಾದ ಪ್ರೇಮದ ಕಡಲು ಬಚ್ಚಿಟ್ಟುಕೊಂಡಿದೆ. ಎಲ್ಲೆಲ್ಲಿ ಆ ಪ್ರೇಮವು ಸ್ವಲ್ಪವಾದರೂ ಪ್ರಕಟವಾಗುವುದೋ, ಅಲ್ಲೆಲ್ಲ ದಿವ್ಯತೆಯೇ ಪ್ರಕಟವಾಗುವುದು. ಪ್ರೇಮವೆಂಬುದು ದೈವೀಗುಣವೇ ಸರಿ.

ಇಂಥ ದಿವ್ಯಪ್ರೇಮವೇ ಕುಟುಂಬದ ಜೀವಾಳ. ಇದನ್ನೇ ವರಕವಿ ದ.ರಾ. ಬೇಂದ್ರೆ ಸರಳ ಸುಂದರ ಸಾಲುಗಳಲ್ಲಿ ಹೀಗೆ ಹೇಳುತ್ತಾರೆ: **ನಾನು ಬಡವಿ, ಆತ ಬಡವ, ಒಲವೆ ನಮ್ಮ ಬದುಕು, ಬಳಸಿಕೊಂಡೆವದನೆ ನಾವು ಅದಕು ಇದಕು ಎದಕು**. ಕುಟುಂಬವು ಸಾಗುವುದು ಈ ಒಲವಿನಿಂದಲೇ. ಅವರು ಹೇಳುವಂತೆ ಪ್ರೀತಿಯು ಎಲ್ಲದಕ್ಕೂ ಉಪಯೋಗಕ್ಕೆ ಬರುತ್ತದೆ; ಎಲ್ಲ ಸಮಸ್ಯೆಗೂ ಪರಿಹಾರವಾಗುತ್ತದೆ; ಎಂಥ ಕಷ್ಟದ ಪರಿಸ್ಥಿತಿಯಲ್ಲಿಯೂ ಸಂಸಾರವನ್ನು ಸುಸೂತ್ರವಾಗಿ ನಡೆಸುತ್ತದೆ. ಇದೇ ಸಂಸಾರದ ಸಾರಸತ್ವವಾಗಿದೆ.

### ಆದ್ಯತೆ

ನಾವು ಯಾವುದಕ್ಕೆ ಪ್ರಾಶಸ್ತ್ಯ ನೀಡುತ್ತೇವೆಯೋ, ಅದರ ಮೇಲೆ ಹೆಚ್ಚು **ಗಮನ** ಕೊಡುತ್ತೇವೆ, ಹೆಚ್ಚು **ಸಮಯ**ವನ್ನು ಅದಕ್ಕಾಗಿ ವಿನಿಯೋಗಿಸುತ್ತೇವೆ, ಹೆಚ್ಚು **ಶಕ್ತಿ**ಯನ್ನು ಅದಕ್ಕೆ ವ್ಯಯಮಾಡುತ್ತೇವೆ. ನಮ್ಮಲ್ಲಿ ಅನೇಕರಿಗೆ ಕೌಟುಂಬಿಕ ಸೌಹಾರ್ದತೆಯು ಆದ್ಯತೆಯ ವಿಷಯವಾಗಿರುವುದಿಲ್ಲ. ಉದ್ಯೋಗ, ಹಣ ಮೊದಲಾದುವೇ ಪ್ರಾಮುಖ್ಯತೆಯನ್ನು ಪಡೆದಿರುತ್ತವೆ. ಹೀಗಾಗಿ ಕುಟುಂಬಕ್ಕೆ ಹಾಗೂ ನಮಗೆ ಕೂಡ ಬಹಳ ನಷ್ಟವಾಗುತ್ತದೆ. ನಾವು ಹಣ ಗಳಿಸುವುದು ಕುಟುಂಬದ ಸುಖಕ್ಕೆಂದು. ನಾವು

ಬಯಸುವ ಎಲ್ಲ ಅಧಿಕಾರ, ಪ್ರತಿಷ್ಠೆಗಳೂ ಕುಟುಂಬದ ಪ್ರಯೋಜನಕ್ಕಾಗಿಯೇ. ಹೀಗಾಗಿ ಮೊದಲು ನಾವು ಕುಟುಂಬದ ಬಗ್ಗೆ ಗಮನ ಹರಿಸಬೇಕು.

ಕುಟುಂಬ ನಮ್ಮಿಂದ ಏನನ್ನು ಅಪೇಕ್ಷಿಸುತ್ತದೆ? ಹಣಕ್ಕಿಂತಲೂ ಹೆಚ್ಚಾಗಿ ಪ್ರೀತಿಯನ್ನು ಬಯಸುತ್ತದೆ. ಭೋಗ ಸಾಧನಗಳಿಗಿಂತಲೂ ಹೆಚ್ಚಾಗಿ, ಶಾರೀರಿಕ ಮತ್ತು ಮಾನಸಿಕ ಸಾಮೀಪ್ಯವನ್ನು ಬಯಸುತ್ತದೆ. ನಾವು ನಮ್ಮ ಕುಟುಂಬವನ್ನು ಮೊದಲ ಆದ್ಯತೆಯನ್ನಾಗಿ ಮಾಡಿಕೊಳ್ಳಬೇಕು; ನಮ್ಮ ಮಕ್ಕಳು, ಪತ್ನಿ ಮತ್ತು ತಂದೆತಾಯಿಯರ ಜೊತೆಗೆ ಹೆಚ್ಚು ಸಮಯವನ್ನು ಕಳೆಯುವುದಕ್ಕೆ ಅನುವು ಮಾಡಿಕೊಳ್ಳಬೇಕು. ಅವರ ದಿನನಿತ್ಯದ ಸಣ್ಣಪುಟ್ಟ ಬೇಡಿಕೆಗಳಿಗೆ, ತೊಂದರೆ ತಾಪತ್ರಯಗಳಿಗೆ ಸಹನೆಯಿಂದ ಸಕಾರಾತ್ಮಕವಾಗಿ ಸ್ಪಂದಿಸಬೇಕು. ನಮ್ಮ ಉದ್ಯೋಗದ ಭಾರ ಎಷ್ಟೇ ಇದ್ದರೂ, ಕೌಟುಂಬಿಕ ಜೀವನಕ್ಕೆ ಹೆಚ್ಚು ಮಹತ್ವ ಕೊಡಬೇಕು. ನಮ್ಮ ಕುಟುಂಬದ ಸದಸ್ಯರ ಮೇಲೆ ನಾವು ಪ್ರೀತಿಯನ್ನು ತೋರಿಸಬಹುದಾದ ವಿಧಾನಗಳೆಂದರೆ ಇವೇ.

## ಸುಭದ್ರತೆ

'ಕುಟುಂಬ' ದ ಉದ್ದೇಶ ಅಲ್ಲಿನ ಸದಸ್ಯರಿಗೆ ಭದ್ರತೆಯನ್ನು ಕಲ್ಪಿಸುವುದು. ಭೌತಿಕ, ಮಾನಸಿಕ, ಭಾವನಾತ್ಮಕ – ಹೀಗೆ ಎಲ್ಲಾ ಆಯಾಮಗಳಲ್ಲಿಯೂ, ಕುಟುಂಬದ ಎಲ್ಲ ಸದಸ್ಯರಿಗೂ ಸುರಕ್ಷತೆಯ ಭಾವನೆಯನ್ನು ಮೂಡಿಸುವುದೇ 'ಆದರ್ಶ ಕುಟುಂಬ'. ಇಲ್ಲಿ ಪ್ರೀತಿಯೇ ಭದ್ರತೆಯ ಸತ್ವ. ತಂದೆತಾಯಿಗಳ ಪ್ರೀತಿಯಿಂದ ಮಕ್ಕಳು ಭದ್ರತೆಯ ಮನೋಭಾವವನ್ನು ಬೆಳೆಸಿಕೊಳ್ಳುತ್ತಾರೆ. ಮಕ್ಕಳ ಪ್ರೀತಿಯೂ ತಂದೆತಾಯಿಯರಿಗೆ ಅದೆಷ್ಟೋ ಸುರಕ್ಷತೆಯ, ಸಮಾಧಾನದ ಭಾವನೆಯನ್ನು ಉಂಟುಮಾಡುತ್ತದೆ. ಹೀಗೆ ಪರಸ್ಪರ ಭದ್ರತೆಯ ಭಾವವನ್ನು ಕುಟುಂಬದ ಸದಸ್ಯರು ಕಲ್ಪಿಸಿಕೊಳ್ಳುತ್ತಾರೆ. ಇದರಿಂದಾಗಿ ಮಕ್ಕಳು ಸಂತೋಷ ಮತ್ತು ಆತ್ಮವಿಶ್ವಾಸದಿಂದ ಕೂಡಿದವರಾಗಿ ಬೆಳೆಯುತ್ತಾರೆ. ತಂದೆತಾಯಿಗಳೂ ಮಕ್ಕಳ ಅಭ್ಯುದಯದಿಂದ ನೆಮ್ಮದಿ, ಸಂತೃಪ್ತಿಗಳನ್ನು ಹೊಂದುತ್ತಾರೆ. ಹೀಗೆ ಪ್ರೀತಿಯು ಕುಟುಂಬದ ಸ್ಥಿರತೆಯನ್ನು ಕಾಪಾಡುತ್ತದೆ. ಆ ಮೂಲಕ ತನ್ನ ಸದಸ್ಯರಿಗೆ ಸುಸ್ಥಿರ ಜೀವನದ ಅವಕಾಶವನ್ನು ಕಲ್ಪಿಸುತ್ತದೆ.

## ಪಾರದರ್ಶಕತೆ

ನೈಜಪ್ರೀತಿಯಲ್ಲಿ ಯಾವ ಬಗೆಯ ಅನುಮಾನ, ಸಂದೇಹಗಳಿಗೂ ಆಸ್ಪದವಿಲ್ಲ. ಅಲ್ಲಿ ಸ್ವಂತ ಹಿತಾಸಕ್ತಿಗಿಂತಲೂ ತಾನು ಪ್ರೀತಿಸುವವರ ಹಿತವೇ ಪ್ರಧಾನವಾಗಿರುತ್ತದೆ. ಹೀಗಾಗಿ ಮುಚ್ಚುಮರೆಗಳಿಗೆ ಅವಕಾಶವಿರುವುದಿಲ್ಲ. ಎಷ್ಟೋ ಮನೆಗಳಲ್ಲಿ, ಮನೆಯ ಯಜಮಾನ ಮನೆಗೆ ಬಂದಾಗ ಭಯದ ವಾತಾವರಣ ಸೃಷ್ಟಿಯಾಗುತ್ತದೆ. ಅವನ ಹಿಂದೆ ಒಂದು, ಮುಂದೆ ಒಂದು ನಡೆಯುತ್ತಿರುತ್ತದೆ. ಇದರಿಂದ ಅಸಹನೆ, ದ್ವೇಷ, ಕೋಪ ಮುಂತಾದ ನಕಾರಾತ್ಮಕ ಭಾವನೆಗಳು ಕೌಟುಂಬಿಕ ಪರಿಸರದಲ್ಲಿ ಹೊಗೆಯಾಡುತ್ತಿರುತ್ತವೆ. ಅದು 'ಶೀತಲಯುದ್ಧ'ಕ್ಕೆ ಎಡೆ ಮಾಡಿಕೊಡುತ್ತದೆ. ಕೆಲವೊಮ್ಮೆ ಅದು 'ಉಷ್ಣಯುದ್ಧ'ಕ್ಕೂ ತಿರುಗಬಹುದು. ಅಂಥ ದುರದೃಷ್ಟಕರ ಪರಿಸ್ಥಿತಿ ಒದಗದಂತೆ ನೋಡಿಕೊಳ್ಳುವುದು ಕುಟುಂಬದ ಎಲ್ಲರ ಜವಾಬ್ದಾರಿ. ಅದಕ್ಕಾಗಿ ಪರಸ್ಪರ 'ನಂಬಿಕೆ' ಅತಿ ಮುಖ್ಯ. ನಮಗೆ ಇತರರಿಂದ ಹಾನಿಯಾಗುತ್ತದೆ ಎಂಬ ಭಾವನೆ ಇದ್ದಾಗ, ಅಲ್ಲಿ 'ಅಪನಂಬಿಕೆ' ಮೂಡುತ್ತದೆ. ಅದು ಕಾಣಬರದಂತೆ, ಮುಕ್ತವಾಗಿ ಭಾವನೆಗಳನ್ನು ಹಂಚಿಕೊಳ್ಳುವುದು, ಮಾಹಿತಿ–ಸಮಾಚಾರಗಳನ್ನು ವಿನಿಮಯ ಮಾಡಿಕೊಳ್ಳುವುದು, ಪ್ರತಿಯೊಬ್ಬರ ವೈಯಕ್ತಿಕ ಸಮಸ್ಯೆಗಳ ಭಾರವನ್ನು ಮಿಕ್ಕವರೂ ಹೊತ್ತುಕೊಳ್ಳುವುದು, ಯಾರ ದುರ್ಬಲತೆಯನ್ನೂ ತನ್ನ ಸ್ವಂತ ಹಿತಾಸಕ್ತಿಗೆ ಉಪಯೋಗಿಸಿಕೊಳ್ಳದಿರುವುದು – ಇವೆಲ್ಲವೂ ಮನೆಯಲ್ಲಿ ಮುಕ್ತ, ಸ್ವತಂತ್ರ ವಾತಾವರಣವನ್ನು ಸೃಷ್ಟಿಸುತ್ತವೆ. ಇದು ಕುಟುಂಬದ ಪ್ರತಿಯೊಬ್ಬ ಸದಸ್ಯನ ಸ್ವಸ್ಥ ಬಾಳುವೆಗೂ ಅನುಕೂಲಕರವಾಗುತ್ತದೆ.

## ಪ್ರಾಮಾಣಿಕತೆ

ಕುಟುಂಬದಲ್ಲಿ ಭದ್ರತೆ, ಪಾರದರ್ಶಕತೆಗಳು ನೆಲೆಗೊಳ್ಳಬೇಕಾದರೆ, ಅದರ ಸದಸ್ಯರ ಪ್ರಾಮಾಣಿಕ ಪ್ರಯತ್ನ ಅತ್ಯಗತ್ಯ. ಪ್ರೀತಿಯು ಪ್ರಾಮಾಣಿಕತೆಯನ್ನು ಅಪೇಕ್ಷಿಸುತ್ತದೆ. ಇಲ್ಲದಿದ್ದರೆ ಅದು ಬೂಟಾಟಿಕೆಯಾಗಿಬಿಡುತ್ತದೆ. ಕೌಟುಂಬಿಕ ಸಾಮರಸ್ಯಕ್ಕಿಂತ ನಮ್ಮ ಹಿತಾಸಕ್ತಿಯೇ ಪ್ರಧಾನವಾಗಿದ್ದರೆ, ಅಲ್ಲಿ ಪ್ರಾಮಾಣಿಕತೆ ಇರದು. ಆಗ ಬರಿಯ 'ಕೃತಕ ಪ್ರೀತಿ'ಯ ನೀರಸ ವಾತಾವರಣ ಮನೆಯಲ್ಲಿ ಸೃಷ್ಟಿಯಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ 'ಮಹತ್ವಾಕಾಂಕ್ಷೆ' ಇರುವುದು ತಪ್ಪಲ್ಲ. ಆದರೆ ಅದು ತನ್ನ ಸುತ್ತಮುತ್ತಲಿನ ಸಮಷ್ಟಿಯ ಹಿತಕ್ಕೆ ಬದ್ಧವಾಗಿರಬೇಕು. ಸಮಷ್ಟಿಯ ಅತ್ಯಂತ ಮೂಲಭೂತ ಅಂಶವೇ ಕುಟುಂಬ. ತಮ್ಮ ಕುಟುಂಬಕ್ಕೆ ಹಾನಿಯಾಗುವ, ಅನ್ಯಾಯವಾಗುವ, ಅದರ ಗೌರವವನ್ನು ಕಳೆಯುವ ಯಾವ ಕೆಲಸವನ್ನೂ